ಪೊಲೀಸ್ ಠಾಣೆಗಳಿರುವ ಸ್ಥಳೀಯ ಪದೇಗಳು ಹಾಗೂ ನೌಕರರು

442(742) ಶ್ರೀ ಗೋಪಾಲ ಪೂಜಾರಿ.ಕೆ

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗಳು ಎಷ್ಟು?

ಆ) ಆಯಾ ಪೊಲೀಸ್ ಠಾಣೆಗಳಲ್ಲಿ ಕೆಲಸ ನಿರ್ವಹಿಸಿತ್ತಿರುವ ಠಾಣಾ ವ್ಯಾಪ್ತಿಯಲ್ಲಿನ ಸ್ಥಳೀಯ ಪೇದೆಗಳು ಹಾಗೂ ಇತರ ನೌಕರರುಗಳ ಸಂಖ್ಯೆ ಎಷ್ಟು?

ಇ) ಈ ಠಾಣಾ ವ್ಯಾಪ್ತಿಯ ಸ್ಥಳೀಯ ನೌಕರರುಗಳು ಹಾಗೂ ಪೊಲೀಸ್ ಕಾನ್ಸ್‌ಟೇಬಲ್‌ರವುರಗಳೇ ಸೇವೆ ಸಲ್ಲಿಸುತ್ತಿರುವುದರಿಂದ ಠಾಣೆಗೆ ಬಂದ ದೂರುಗಳು ಬಗ್ಗೆ ಸ್ಥಳೀಯ ನೌಕರರು ಮಾಹಿತಿಯನ್ನು ಪರಿಚಯಸ್ಥರಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ?

ಈ) ಹಾಗಿದ್ದಲ್ಲಿ ಇದನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳವುದೇ?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಒಟ್ಟು 4

ಆ) ಆಯಾ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಠಾಣಾ ವ್ಯಾಪ್ತಿಯಲ್ಲಿನ ಸ್ಥಳೀಯ ಪೊಲೀಸ್ ಕಾನ್ಸ್‌ಟೇಬಲ್‌ಗಳು ಹಾಗೂ ಇತರ ನೌಕರರ ಸಂಖ್ಯೆ ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಪೊಲೀಸ್ ಠಾಣೆಯ ವಿವರ	ಸ್ಥಳೀಯ ಪೊಲೀಸ್ ಕಾನ್ಸ್‌ಟೇಬಲ್‌ಗಳು				ಇತರೆ ನೌಕರರು			
		PSI	ASI	HC	PC	PSI	ASI	HC	PC
1	ಬೈಂದೂರು	–	–	2	3	1	2	6	17

2	ಕೊಲ್ಲೂರು	–	–	–	–	1	2	8	14
3	ಗಂಗೂಳ್ಳಿ	–	–	–	–	1	3	7	19
4	ಕುಂದಾಪುರ	–	1	1	–	1	2	9	30

ಇ) ಇದುವರೆಗೆ ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಮೇಟ್ರೋ ರೈಲ್ವೆ ಕಾಮಗಾರಿಗಳು

443(304) ಶ್ರೀ ಗೋಪಾಲಯ್ಯ ಕೆ (ಮಹಾಲಕ್ಷ್ಮೀ ಲೇಔಟ್)

ಅ) ಬೆಂಗಳೂರು ಮೆಟ್ರೋ ರೈಲ್ವೆ ಯೋಜನೆಯ ಕಾಮಗಾರಿಗಳ ಇತ್ತೀಚಿನ ಪ್ರಗತಿಯೇನು (ವಿವರ ನೀಡುವುದು)

ಆ) ಯಾವ ಯಾವ ಹಂತದ ಯೋಜನೆಗಳು 2014 ರೊಳಗೆ ಪೂರ್ಣಗೊಳ್ಳುತ್ತವೆ.

ಇ) ಈ ಯೋಜನೆಗಾಗಿ ಇಲ್ಲಿಯವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವೆಚ್ಚಮಾಡಿರುವ ಹಣವೆಷ್ಟು;

ಈ) ಈ ಯೋಜನೆಗಾಗಿ ಬ್ಯಾಂಕ್‌ಗಳು ಹಾಗೂ ಇತರೆ ಹಣಕಾಸಿನ ಸಂಸ್ಥಗಳಿಂದ ಪಡೆದ ಸಾಲವೆಷ್ಟು?

ಉ) ಈ ಯೋಜನೆಯ ಕಾಮಗಾರಿಗಳು ವಿಳಂಭವಾಗಿರಲು ಕಾರಣಗಳೇನು? ಇದರಿಂದಾಗುವ ನಷ್ಟವೆಷ್ಟು;